# ನೀರಜ್–ನದೀಮ್ ಭಾಯಿ ಭಾಯಿ



ಪುರುಷರ ಜಾವೆಲಿನ್ ಥ್ರೋನಲ್ಲಿ ವಿಶ್ವ ಚಾಂಪಿಯನ್ ಆದ ನೀರಜ್ ಹಾಗೂ ಅವರ ನಂತರದ ಸ್ಥಾನದಲ್ಲಿ ನಿಂತ ಪಾಕಿಸ್ತಾನದ ನದೀಮ್ ಇಬ್ಬರ ನಡುವೆ ಸ್ನೇಹ ಸಂಬಂಧವಿದೆ. ಯೂರೋಪ್‌ನ ದೈತ್ಯ ಶಕ್ತಿಗಳನ್ನೆಲ್ಲ ಚಿಂದಿ ಮಾಡಬಲ್ಲ ಬಂಧ ಇದಾಗುತ್ತಿದೆ ಎನ್ನುವುದು ಸ್ಪರ್ಧೆಯ ಸೂಕ್ಷ್ಮ ಬಲ್ಲ ಅನೇಕರ ಅಭಿಪ್ರಾಯ.

■ ಎನ್ವಿ

ಆರು ಅಡಿ ಎತ್ತರದ ನೀರಜ್ ಚೋಪ್ರಾ. ಜಾವೆಲಿನ್ ಥ್ರೋನಲ್ಲಿ ವಿಶ್ವ ಚಾಂಪಿಯನ್ ಆದಮೇಲೆ ಭಾರತದ ಬಾವುಟ ಹಿಡಿದು ಕಣದಲ್ಲಿ ನಿಂತಿದ್ದರು. ಮುಖದಲ್ಲಿ ಹೈವೋಲ್ಟೇಜ್ ನಗು. ಕ್ಯಾಮೆರಾ ಫ್ರೇಮ್‌ನಲ್ಲಿ ಅವರು ಹಾಗೂ ಮೂರನೇ ಸ್ಥಾನ ಪಡೆದ, ಜೆಕ್ ರಿಪಬ್ಲಿಕ್‌ನ ಯಾಕುಬ್ ವಾಡ್ಲೇಚ್. 'ಬಾ ಇಲ್ಲಿ' ಎಂದು ನೀರಜ್ ಕರೆದೊಡನೆ ಅವರನ್ನು ಬಂದು ಸೇರಿಕೊಂಡವರು ಪಾಕಿಸ್ತಾನದ ಅರ್ಷದ್ ನದೀಮ್. ಈ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಅವರಿಗಿಂತ ಎರಡು ಇಂಚು ಹೆಚ್ಚು ಎತ್ತರದವರು. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಅವರಿಗೆ ಎರಡನೇ ಸ್ಥಾನ ಸಂದಿತ್ತು. ಭಾರತ ಧ್ವಜದ ನೆರಳಲ್ಲಿ ಪಾಕಿಸ್ತಾನದ ತನ್ನ ಸ್ನೇಹಿತನನ್ನೂ ನೀರಜ್ ಸೇರಿಸಿಕೊಂಡಿದ್ದು ಈ ಕಾಲಕ್ಕೆ ಅಗತ್ಯವಿರುವ ಸದ್ಭಾವನೆಯೊಂದರ ಪ್ರಾತ್ಯಕ್ಷಿಕೆಯೇ ಸರಿ.

ಪಾಕಿಸ್ತಾನಕ್ಕೆ ಸೇರಿದ ಪಂಜಾಬ್ ಭಾಗದ ಮಿಆನ್ ಚುನೂ ಎಂಬ ಹಳ್ಳಿಯವರು ಅರ್ಷದ್ ನದೀಮ್. ಎಂಟು ಮಕ್ಕಳಲ್ಲಿ ಮೂರನೆಯವರು. ಬಾಲ್ಯದಲ್ಲಿ ಎಲ್ಲರಂತೆ ಅವರೂ ಕ್ರಿಕೆಟ್ ಆಡುತ್ತಿದ್ದರು. ಕೋಚ್ ಸೈಯದ್ ಫಯಾಜ್ ಬುಖಾರಿ ಆ ಆಟವನ್ನು ಬಿಡಿಸಿ, ಜಾವೆಲಿನ್‌ನಲ್ಲಿ ತರಬೇತಿ ನೀಡಿದ್ದು. ನದೀಮ್ ತಂದೆ ಮುಹಮ್ಮದ್ ಅಶ್ರಫ್ ಕೂಡ ಸ್ಪರ್ಧೆ ನಡೆದ ಬುಡಾಪೆಸ್ಟ್‌ನಲ್ಲಿ ಇದ್ದರು. ಮನೆಯಲ್ಲಿ ಉಣ್ಣುವಾಗಲೂ ತಮ್ಮ ಮಗ ನೀರಜ್ ವಿಷಯ ಪ್ರಸ್ತಾಪಿಸುವುದನ್ನು ಅವರು ಮೆಲುಕು ಹಾಕಿದರು. ನೀರಜ್ ಕೂಡ ನದೀಮ್ ಜಾವೆಲಿನ್ ಎಸೆದ ರೀತಿಯನ್ನು ಮನದುಂಬಿ ಮೆಚ್ಚಿಕೊಂಡರು.

ಏಷ್ಯಾಖಂಡದ ಎರಡು ರಾಷ್ಟ್ರಗಳು ಯೂರೋಪ್‌ನ ಜಾವೆಲಿನ್ ಎಸೆತಗಾರರ ಕಾರ್ಖಾನೆಗಳನ್ನೂ ಮೀರಿಸುವ ಮಟ್ಟಕ್ಕೆ ಬೆಳೆದು ನಿಂತಿರುವ ಪರಿಗೆ ಮೇಲಿನ ಪ್ರಸಂಗವೊಂದು ಉದಾಹರಣೆ.

ಭಾರತ–ಪಾಕಿಸ್ತಾನದ ನಡುವಿನ ಹಣಾಹಣಿ ಎಂದೇ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿನ ಜಾವೆಲಿನ್ ಥ್ರೋ ಸ್ಪರ್ಧೆಯನ್ನು ಅನೇಕರು ಬಿಂಬಿಸಿದ್ದರು. ಸ್ಪರ್ಧೆ ನಡೆಯುವ ಸಂದರ್ಭದಲ್ಲಿ ಹೆಚ್ಚಾಗಿ ಮೊಬೈಲ್ ಬಳಸದ ನೀರಜ್, ಒಂದೊಮ್ಮೆ ನೋಡಿದಾಗ ಅವರ ಕಣ್ಣಿಗೆ ಬಿದ್ದದ್ದು ಅಂತಹುದೇ ಪೋಸ್ಟ್‌ಗಳು. ತಕ್ಷಣವೇ ಮೊಬೈಲ್ ಎತ್ತಿಟ್ಟು, ಸ್ಪರ್ಧೆಯ ಗುರಿಯತ್ತ ಕಣ್ಣು ನೆಟ್ಟರಷ್ಟೆ.

2016ರಲ್ಲಿ ಏಷ್ಯನ್ ಗೇಮ್ಸ್ ನಡೆದಾಗ ನೀರಜ್ ತಮ್ಮ ರಾಷ್ಟ್ರ ದಾಖಲೆಯ ದೂರಕ್ಕೆ ಜಾವೆಲಿನ್ ಎಸೆದು, ಚಿನ್ನದ ಪದಕ ಗೆದ್ದಿದ್ದರು. ಆಗ ನದೀಮ್ ಕಂಚಿನ ಪದಕಕ್ಕೆ ಕೊರಳೊಡ್ಡಿದ್ದರು. 2021ರ ಒಲಿಂಪಿಕ್ಸ್‌ನಲ್ಲಿ ಕೂಡ ಈ ಆಟಗಾರ ನೀರಜ್ ಆರಾಧಕನೇ ಆಗಿದ್ದರು. ಎಷ್ಟರ ಮಟ್ಟಿಗೆ ಎಂದರೆ, ಆ ಸ್ಪರ್ಧೆಯಲ್ಲಿ ನೀರಜ್ ಎಸೆದ ಜಾವೆಲಿನ್ ಅನ್ನೇ ಅವರೂ ಕೈಗೆತ್ತಿಕೊಂಡಿದ್ದರು. ಆಗ ಜನ ಅವರನ್ನು ಟ್ರೋಲ್ ಮಾಡಿದ್ದರು. ನೀರಜ್ ಸಾಮಾಜಿಕ ಮಾಧ್ಯಮದಲ್ಲಿ ತಾವೂ ಒಂದು ಪೋಸ್ಟ್ ಹಾಕಿ, 'ಒಬ್ಬರು ಬಳಸಿದ ಜಾವೆಲಿನ್ ಅನ್ನು ಇನ್ನೊಬ್ಬರು ಪ್ರಯೋಗಿಸಲು ನಿಯಮವೇ ಅನುಮತಿ ನೀಡಿದೆ. ಹೀಗಿರುವಾಗ ಜನರು ದಯವಿಟ್ಟು ವೃಥಾ ಟೀಕೆ ಮಾಡಬಾರದು' ಎಂದು ವಿನಂತಿಸಿಕೊಂಡಿದ್ದರು. ಆ ಒಲಿಂಪಿಕ್ಸ್‌ನಲ್ಲಿ ನೀರಜ್ ಬಂಗಾರ ಗೆದ್ದಿದ್ದರೆ, ಯಾಕುಬ್ ವಾಡ್ಲೇಚ್ ಬೆಳ್ಳಿ ಜಯಿಸಿದ್ದರು. ನದೀಮ್ ಆಗ ಇದ್ದುದು ಐದನೇ ಸ್ಥಾನದಲ್ಲಿ. ಈ ಸಲ ಅವರು ಎಸೆದ ದೂರ ಆಗಿನದಕ್ಕಿಂತ 3.2 ಮೀಟರ್‌ನಷ್ಟು ಹೆಚ್ಚು. ಇದನ್ನು ನೀರಜ್ ಕೂಡ ಮೆಚ್ಚಿಕೊಂಡರು. ಅಷ್ಟೇ ಅಲ್ಲ, ಭಾರತದ ಸ್ಟಾರ್ ಅಥ್ಲೀಟ್‌ನ ತಾಯಿ ಸರೋಜ್ ದೇವಿ ಅವರೂ ಪಾಕಿಸ್ತಾನದ ಸ್ಪರ್ಧಿ ಎರಡನೇ ಸ್ಥಾನ ಪಡೆದಿದ್ದಕ್ಕೆ ಖುಷಿಪಟ್ಟರು.

ನೀರಜ್ ಅಲ್ಲದೆ ಕರ್ನಾಟಕದ ಡಿ.ಪಿ. ಮನು ಮತ್ತು ಒಡಿಶಾದ ಕಿಶೋರ್ ಜೇನಾ ಅವರೂ ವಿಶ್ವ ಅಥ್ಲೆಟಿಕ್ಸ್ ಜಾವೆಲಿನ್ ಥ್ರೋ ಫೈನಲ್‌ನಲ್ಲಿ ಸ್ಪರ್ಧಿಸಿದ್ದರು. ಜೇನಾ ಹಾಗೂ ಮನು ಕ್ರಮವಾಗಿ ಐದು ಹಾಗೂ ಆರನೇ ಸ್ಥಾನ ಗಳಿಸಿದ್ದೂ ಉಲ್ಲೇಖನೀಯ. ನಲವತ್ತು ವರ್ಷಗಳ ಇತಿಹಾಸದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಕಣದಲ್ಲಿ ಅಗ್ರ ಆರು ಜಾವೆಲಿನ್ ಥ್ರೋ ಸ್ಪರ್ಧಿಗಳ ಪೈಕಿ ಒಂದೇ ದೇಶದ ಮೂವರು ಹೀಗೆ ಇದುವರೆಗೂ ಇದ್ದಿರಲಿಲ್ಲ. ನೀರಜ್ ಹೇಗೆ ಇನ್ನಷ್ಟು ಹುರಿಯಾಳುಗಳೆಂಬ ಬೋಗಿಗಳಿಗೆ ಎಂಜಿನ್ ಆಗಿದ್ದಾರೆ, ನೋಡಿ.

ಜೆಕ್ ಗಣರಾಜ್ಯದವರೇ ಆದ ಜಾನ್ ಜೆಲೆಜ್ನಿ 1996ರಲ್ಲಿ 98.48 ಮೀಟರ್ ದೂರಕ್ಕೆ ಎಸೆದಿರುವುದು ಜಾವೆಲಿನ್‌ನಲ್ಲಿ ವಿಶ್ವ ದಾಖಲೆ. ಆ ಗಡಿ ಮೀರುವುದು ನೀರಜ್ ಕನಸು. ಅದು ನನಸಾಗಬೇಕಾದರೆ, ನೀರಜ್ ಈ ಸಲ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎಸೆದ 88.17 ಮೀಟರ್‌ಗಿಂತ ಇನ್ನೂ 10.31 ಮೀಟರ್ ದೂರಕ್ಕೆ ಜಾವೆಲಿನ್ ಎಸೆಯಬೇಕು. ಅಂತಹ ಹೆಗ್ಗುರಿ ಇಟ್ಟುಕೊಂಡಿರುವುದರಿಂದಲೇ, 'ನನ್ನನ್ನು ದಿಗ್ಗಜ ಸ್ಪರ್ಧಿ ಎನ್ನಬೇಡಿ' ಎಂದು ಅವರು ಸಂಕೋಚದಿಂದಲೇ ಹೇಳುತ್ತಿರುವುದು.

ಪ್ರತಿಕ್ರಿಯಿಸಿ: feedback@sudha.co.in